ಸಾಕ್ಷಿಯನ್ನು ದಿನಾಂಕಃ**-31-08-2024**ರಂದು ಕರೆಯಿಸಿ ಪ್ರಮಾಣ ವಚನ **ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರಪಡಿಸಿದ್ದು, ಅದರಲ್ಲಿ ಬರೆದ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿದ್ದು, ಅದು ನಿಜವಿರುತ್ತವೆ ಮತ್ತು ಅದನ್ನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

ಐದು ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-1 ರಿಂದ ನಿಪಿ-5 ಎಂದು, ಹಕ್ಕು ಬದಲಾವಣೆಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ಗ್ರಾಮ ಪಂಚಾಯತಿ, ಕುಂಚನೂರ ಇವರು ಕೊಟ್ಟಂತಹ ದೃಡೀಕ್ಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ಓ ಎಸ್ ನಂ.64/2020 ರ ಆದೇಶ ಪುಟದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, ಸದರಿ ಕೇಸಿನ ದಾವಾ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ಸದರಿ ಕೇಸಿನಲ್ಲಿ ಪ್ರತಿವಾದಿಯರು ಹಾಕಿದಂತಹ ಪ್ರತಿವಾದ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ಸದರಿ ಕೇಸಿನಲ್ಲಿ ಕೇಸನ್ನು ವಜಾಗೊಳಿಸಲು ಹಾಕಿದಂತಹ ಮೆಮೋದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ-** ಪ್ರತಿವಾದಿ ಪರ ವಕೀಲರು ಹಾಜರ ಇದ್ದು, ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.